# ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

**ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು-560001**

ಸಂಖ್ಯೆ: ಕರಾಆ/ಆಡಳಿತ/46/2017

ದಿನಾಂಕ: 24.11.2017

## ಅಧಿಸೂಚನೆ

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: 2368/2011 ದಿನಾಂಕ: 9.2.2017ರಲ್ಲಿ ಹೇಳಿದ ತೀರ್ಪಿನ ಅನ್ವಯ ಕರ್ನಾಟಕ ಗ್ರಾಹಕ ಸಂರಕ್ಷಣಾ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯ ಅಂತಿಮ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ ಪ್ರಕಟಿಸುವ ಬಗ್ಗೆ

ಉಲ್ಲೇಖ:
1) ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸಮ ಸಂಖ್ಯೆಯ ಅಧಿಸೂಚನೆಯ ದಿನಾಂಕ 15.07.2017.
2) ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಎಲ್ಲಾ ವೃಂದದಲ್ಲಿ ದಿನಾಂಕ: 01.04.2017ರಂದಿಗೆ ಹೊರಡಿಸಿರುವ ಜೇಷ್ಠತಾ ಪಟ್ಟಿಗಳು
3) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: **DPAR 182 SRR 2011, Bengaluru, Dated 06-05-2017.**
4) ಶ್ರೀಮತಿ ರೇಷ್ಮಾ ಖಾನಮ್ ಸಿ.ಎ., ಶಿರಸ್ತೇದಾರ್, ಇವರ ಆಕ್ಷೇಪಣೆ ದಿನಾಂಕ 01.08.2017.
5) ಶ್ರೀ ಧರ್ಮೇಂದ್ರ ಪಿ.ಬಿ., ಶಿರಸ್ತೇದಾರ್, ಇವರ ಆಕ್ಷೇಪಣೆ ದಿನಾಂಕ 03.08.2017.
6) ಶ್ರೀಮತಿ ಶ್ರೀದೇವಿ, ಶಿರಸ್ತೇದಾರ್, ಇವರ ಆಕ್ಷೇಪಣೆ ದಿನಾಂಕ 14.08.2017.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಬಿ.ಕೆ. ಪವಿತ್ರ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ:2368/2011 ಹಾಗೂ ಸಿವಿಲ್ ಅಪೀಲ್ ಸಂಖ್ಯೆ:2369/2011, 2370-2373/2011, 2374-2377/2011, 2378/2011, 2379/2011 4320-4327/2011 ಮತ್ತು 5280-5286/2011ರಲ್ಲಿ ದಿನಾಂಕ 09-02-2017ರಂದು ನೀಡಿರುವ ತೀರ್ಪಿನಲ್ಲಿ Karnataka Determination of Seniority of the Government Servants promoted on the basis of Reservation (to the posts in the civil services of the State) Act, 2002ರ, ಸೆಕ್ಷನ್ 3 ಮತ್ತು 4ನ್ನು "ultra vires Articles 14 & 16 of the Constitution" ಎಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ.

*"In view of the above,we allow these appeals, set aside the impugned judgment and declare the provisions of the impugned Act to the extent of doing away with the 'catch up' rule and providing for consequential seniority under Sections 3 and 4 to persons belonging to SCs and STs on promotion against roster points to be ultra vires Articles 14 and 16 of the Constitution. The judgment will not affect those who have already retired and will not affect finaicial benefits already taken. Consequential promotions granted to serving employees, based on consequential seniority benefit, will be treated as adhoc and liable to be reviewed. Seniority list may be now revised in the light of this judgment within three months from tody. Further consequential action may be taken accordingly within next three months."*

ಈ ಹಿನ್ನಲೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:2368/2011 ಕುರಿತಂತೆ ದಿನಾಂಕ 09-02-2017ರಂದು ನೀಡಿದ ತೀರ್ಪಿನ ಅನ್ವಯ ಹಾಗೂ ಉಲ್ಲೇಖ (3)ರ ಸರ್ಕಾರದ ಆದೇಶದಲ್ಲಿ

ನೀಡಿದ ಮಾರ್ಗಸೂಚಿಗಳನ್ವಯ ಕರ್ನಾಟಕ ಗ್ರಾಹಕ ಸಂರಕ್ಷಣಾ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯ ದಿನಾಂಕ 01-01-1999 ರಿಂದ ದಿನಾಂಕ 02-05-2017ರಲ್ಲಿ ಇದ್ದಂತೆ ಪ್ರತಿ ವರ್ಷ ಪ್ರಕಟಿಸಿದ ಗ್ರೂಪ್ 'ಬಿ' ವೃಂದದಲ್ಲಿ ಬರುವ ಸಹಾಯಕ ರಿಜಿಸ್ಟ್ರಾರ್ ಮತ್ತು ಸಹಾಯಕ ಆಡಳಿತಾಧಿಕಾರಿಗಳು, ಗ್ರೂಪ್ 'ಸಿ' ವೃಂದದಲ್ಲಿ ಬರುವ ಶಿರಸ್ತೇದಾರರು, ಶೀಘ್ರಲಿಪಿಗಾರರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯುಕರು, ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್ 'ಡಿ' ನೌಕರರ ಜೇಷ್ಠತಾ ಪಟ್ಟಿಗಳನ್ನು ಪುನರಾವಲೋಕಿಸಿ ಅನುಕ್ರಮವಾಗಿ ಅನುಬಂಧ 1 ರಿಂದ 8ರವರೆಗಿನ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಉಲ್ಲೇಖ(1)ರಲ್ಲಿ ಪ್ರಕಟಿಸಿ, ಆಕ್ಷೇಪಣೆಗಳಿದ್ದಲ್ಲಿ, ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 30 ದಿನಗಳೊಳಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಅದರಂತೆ, ನಿಗದಿತ ದಿನಾಂಕದೊಳಗಾಗಿ ಸ್ವೀಕೃತವಾಗಿರುವ ಉಲ್ಲೇಖ (4) ರಿಂದ (6)ರವರೆಗಿನ ಆಕ್ಷೇಪಣೆಗಳನ್ನು ಮತ್ತು ಉಲ್ಲೇಖ(3)ರಲ್ಲಿ ಸರ್ಕಾರ ನೀಡಿದ ಮಾರ್ಗಸೂಚಿಗಳನ್ವಯ ಹಾಗೂ ಕರ್ನಾಟಕ ಗ್ರಾಹಕ ಸಂರಕ್ಷಣಾ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯ ವೃಂದ ಮತ್ತು ನೇಮಕಾತಿ ನಿಯಮಗಳು 2003ನ್ನು ಪರಿಶೀಲಿಸಿಕೊಂಡು, ಕರ್ನಾಟಕ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯ ಗ್ರೂಪ್ 'ಬಿ' ವೃಂದದಲ್ಲಿ ಬರುವ ಸಹಾಯಕ ರಿಜಿಸ್ಟ್ರಾರ್ ಮತ್ತು ಸಹಾಯಕ ಆಡಳಿತಾಧಿಕಾರಿಗಳು, ಗ್ರೂಪ್ 'ಸಿ' ವೃಂದದಲ್ಲಿ ಬರುವ ಶಿರಸ್ತೇದಾರರು, ಶೀಘ್ರಲಿಪಿಗಾರರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯುಕರು, ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್ 'ಡಿ' ನೌಕರರ ಜೇಷ್ಠತಾ ಪಟ್ಟಿಗಳನ್ನು ಪುನರಾವಲೋಕಿಸಿ ಅನುಕ್ರಮವಾಗಿ ಅನುಬಂಧ 1 ರಿಂದ 8ರವರೆಗಿನ ಮಾಹಿತಿಯನ್ನು ಅಂತಿಮಗೊಳಿಸಿ, ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

B.S. Indrakala

**(ನ್ಯಾಯಮೂರ್ತಿ ಬಿ.ಎಸ್.ಇಂದ್ರಕಲಾ)**
ಅಧ್ಯಕ್ಷರು,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ,
ಬಸವ ಭವನ, ಬೆಂಗಳೂರು.

ಇವರಿಗೆ

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಸದರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಗಳು:

1. ಸರ್ಕಾರದ ಕಾರ್ಯದರ್ಶಿಗಳು, ಆಹಾರ ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸ ಸೌಧ, ಬೆಂಗಳೂರು-560001.
2. ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ (ಎಲ್ಲಾ ಜಿಲ್ಲಾ ವೇದಿಕೆಗಳಿಗೆ).
3. ಸಂಬಂಧಪಟ್ಟ ನೌಕರರಿಗೆ (ರಾಜ್ಯ ಆಯೋಗ / ಜಿಲ್ಲಾ ವೇದಿಕೆಗಳಿಗೆ ಇ-ಮೇಲ್ ಮೂಲಕ).
4. ರಾಜ್ಯ ಆಯೋಗದ ಸೂಚನಾ ಫಲಕಕ್ಕೆ.
5. ಕಛೇರಿ ಪ್ರತಿ.